**ಕುಂದಾಪುರ ತಾಲ್ಲೂಕು ಶಂಕರನಾರಾಯಣ ಪದವಿ ಪೂರ್ವ ಕಾಲೇಜಿನಲ್ಲಿ ಉಪನ್ಯಾಸಕರಿಲ್ಲದೆ ತೊಂದರೆ**

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಅಧ್ಯಕ್ಷರೆ, ಕುಂದಾಪುರ ತಾಲ್ಲೂಕು ಶಂಕರನಾರಾಯಣ ಪದವಿ ಪೂರ್ವ ಕಾಲೇಜಿನಲ್ಲಿ ಇದೇ ಶೈಕ್ಷಣಿಕ ವರ್ಷದಲ್ಲಿ ಹತ್ತು ಜನ ಉಪನ್ಯಾಸಕರು ಇದ್ದು ಅದರಲ್ಲಿ ಐದು ಜನರನ್ನು ವರ್ಗಾವಣೆ ಮಾಡಿದ್ದಾರೆ. ಹೀಗೆ ಐದು ಜನ ವರ್ಗಾವಣೆ ಮಾಡಿರತಕ್ಕ ಆಂಗ್ಲ ಭಾಷಾ, ಕನ್ನಡ, ಹಿಂದಿ, ಜೀವಶಾಸ್ತ್ರ ಹಾಗೂ ಗಣಿತ ಶಾಸ್ತ್ರ ಉಪನ್ಯಾಸಕರನ್ನು ಬದಲಿ ವ್ಯವಸ್ಥೆ ಇಲ್ಲದೇ ವರ್ಗಾವಣೆ ಮಾಡಿದ್ದಾರೆ. ಇದರಿಂದ ಕಾಲೇಜು ಮುಚ್ಚತಕ್ಕ ಪರಿಸ್ಥಿತಿ ಇದೆ. ವಿದ್ಯಾರ್ಥಿಗಳು ಪ್ರತಿಭಟನೆ ಮಾಡತಕ್ಕ ಸಾಧ್ಯತೆ ಇದೆ. ಆದ್ದರಿಂದ ಯಾವುದೇ ವರ್ಗಾವಣೆ ಮಾಡತಕ್ಕ ಸಂದರ್ಭದಲ್ಲಿ ಬದಲಿ ವ್ಯವಸ್ಥೆ ಇಲ್ಲದೇ ವರ್ಗಾವಣೆ ಮಾಡಬಾರದು. ಏಕೆಂದರೆ ಕಾಲೇಜು ಪ್ರಾರಂಭ ಮಾಡತಕ್ಕದ್ದು, ಕಾಲೇಜು ಇರತಕ್ಕದ್ದು ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ. ಇದು ಉಪನ್ಯಾಸಕರಿಗೋಸ್ಕರ ಕಾಲೇಜು ಮಾಡಿದ ಹಾಗಿದೆ. ಆದ್ದರಿಂದ ಇದರ ಬಗ್ಗೆ ಬದಲಿ ವ್ಯವಸ್ಥೆ ತಕ್ಷಣ ಮಾಡಬೇಕು. ಏಕೆಂದರೆ ನಾವು ಶಾಲಾ ಅಭಿವೃದ್ಧಿ ಸಮಿತಿಯವರು, ಕಾಲೇಜಿನವರು ಬದಲಿ ವ್ಯವಸ್ಥೆಯನ್ನು ಮಾಡುವ ಹಾಗೆ ಇಲ್ಲ. ಕೊಠಡಿ ಬೇಕಾದರೆ ಮಾಡಬಹುದು, ಫರ್ನಿಚರ್ ಬೇಕಾದರೆ ಮಾಡಬಹುದು. ಬೇಕಾದ ಬದಲಿ ವ್ಯವಸ್ಥೆ ಮಾಡಬಹುದು. ಉಪನ್ಯಾಸಕರ ಬದಲಿ ವ್ಯವಸ್ಥೆ ಮಾಡುವ ಹಾಗೆ ಇಲ್ಲ. ಆದ್ದರಿಂದ, ಆದ್ಯತೆಯ ಮೇಲೆ ಈ ಬಗ್ಗೆ ಸನ್ಮಾನ್ಯ ಸಚಿವರು ಕ್ರಮ ಕೈಗೊಳ್ಳಬೇಕೆಂದು ನಾನು ಮನವಿಯನ್ನು ಮಾಡುತ್ತಿದ್ದೇವೆ.

ಶ್ರೀ ಎಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಬದಲಿ ವ್ಯವಸ್ಥೆ ಕ್ರಮ ಹೇಗೆ ಬರುತ್ತದೆ ಎಂದರೆ ಮ್ಯುಚುಯಲ್ ಟ್ರಾನ್ಸ್‌ಫರ್ ಆದಾಗ ಮಾತ್ರ ಬದಲಿ ವ್ಯವಸ್ಥೆ ಆಗುತ್ತದೆ. ಇವತ್ತಿನ ವರ್ಗಾವಣೆ ಸಂದರ್ಭದಲ್ಲಿ ಅವು ಹೆಚ್ಚಿನ ರೀತಿಯಲ್ಲಿ ಬರುವುದಿಲ್ಲ. ಆದರೂ ಸಹ ಅಲ್ಲಿರತಕ್ಕ ತೊಂದರೆಗಳಿಗೆ ಏನು ಪರಿಹಾರ ಮಾಡಬಹುದು ಎನ್ನತಕ್ಕ ಬಗ್ಗೆ ಈ ಮಾತನ್ನು ಹೇಳುತ್ತಿದ್ದೇನೆ. ಸರ್ಕಾರದ ವರ್ಗಾವಣೆ ಮಾರ್ಗಸೂಚಿಯ ಹಿನ್ನೆಲೆಯಲ್ಲಿ ವರ್ಗಾವಣೆ ಕೋರಿರುವ ಉಪನ್ಯಾಸಕರನ್ನು ವರ್ಗಾವಣೆ ಮಾಡಲಾಗಿದೆ. ಖಾಲಿ ಆದ ಜಾಗಕ್ಕೆ ಬೇರಾರೂ ಕೋರಿಕೆ ಸಲ್ಲಿಸದಿರುವುದರಿಂದ ಆ ಜಾಗಕ್ಕೆ ಉಪನ್ಯಾಸಕರನ್ನು ವರ್ಗಾಯಿಸಲು ಸಾಧ್ಯವಾಗಿಲ್ಲ. ಅಂದರೆ ಮ್ಯುಚುಯಲ್ ಟ್ರಾನ್ಸ್‌ಫರ್ ಆಗಿದ್ದರೆ ಇಮ್ಮಿಡಿಯಟ್ ಭರ್ತಿ ಆಗುತ್ತಿತ್ತು. ಆ ರೀತಿ ಆಗಿಲ್ಲ ಅದು. ಆದರೂ ಬದಲಿ ಉಪನ್ಯಾಸಕರನ್ನು ನೀಡಲು ಸಧ್ಯದಲ್ಲಿ ವ್ಯವಸ್ಥೆ ಮಾಡಲಾಗುವುದು. ಅಲ್ಲಿಯವರೆಗೆ ಪಕ್ಕದ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಿಂದ ಪಾಠ ಪ್ರವಚನಕ್ಕೆ ಅನುಕೂಲ ಮಾಡಿ ಕೊಡಬೇಕು ಎಂಬ ದೃಷ್ಟಿಯಿಂದ ವ್ಯವಸ್ಥೆ ಮಾಡಲಾಗುತ್ತದೆ. ಇಂತಹ ಸಮಸ್ಯೆ ಬಹಳ ಕಡೆ ಇದ್ದು ಇದಕ್ಕೆ ಸಮಯ, ಸ್ವಲ್ಪ ಕಾಲ ಬೇಕಾಗುತ್ತದೆ. ಉಪಾಧ್ಯಾಯರ ಸಂಖ್ಯೆ ಕಡಿಮೆ ಇದ್ದುದರಿಂದ ಕೆಲವರು ಬಹಳ ವರ್ಷದಿಂದ ಅಲ್ಲಿಯೇ ಇದ್ದೇವೆಂದು ಟ್ರಾನ್ಸ್‌ಫರ್ ಮಾಡಿಸಿಕೊಂಡಿದ್ದಾರೆ. ತಾವೇನು ಹೇಳುತ್ತಿದ್ದೀರಿ ನಿಜ. ಅಲ್ಲಿ ಉಪಾಧ್ಯಾಯರ ಸಂಖ್ಯೆ ಕಡಿಮೆ ಇದೆ. ಪಕ್ಕದ ಪದವಿ ಪೂರ್ವ ಕಾಲೇಜಿನಿಂದ ಅಲ್ಲಿಗೆ ಉಪನ್ಯಾಸಕರನ್ನು ನೇಮಕ ಮಾಡಿ ವ್ಯವಸ್ಥೆ ಸರಿಯಾದ ರೀತಿಯಲ್ಲಿ ಮಾಡವುದಕ್ಕೆ ವ್ಯವಸ್ಥೆ ಮಾಡುತ್ತೇನೆ.